ಉದಾಹರಣೆಗೆ, ನಿಮ್ಮ ಸ್ನೇಹಿತ ನನ್ನ ಪರಮಶತ್ರುವಾಗಿರಬಹುದು ಅಥವಾ ನಿಮ್ಮ ಶತ್ರು ನನ್ನ ಮಿತ್ರನಾಗಿರಬಹುದು. ನಮ್ಮಿಬ್ಬರಿಗೂ ಅನಿಸುತ್ತದೆ, ಏಕೆ ಇಂಥವರ ಜೊತೆಗೆ ಸಹವಾಸ ಮಾಡಬೇಕು? ಅದು ಸರಿಯಲ್ಲ. ಹಾಗಾದರೆ ಆ ವ್ಯಕ್ತಿ ಒಳ್ಳೆಯವನೋ ಅಥವಾ ಕೆಟ್ಟವನೋ – ಯಾವುದು ಸತ್ಯ? ಶ್ರೀಮಾತೆಯವರು ಅತ್ಯಂತ ಗುಣಗ್ರಾಹಿಗಳು. ಒಬ್ಬ ವ್ಯಕ್ತಿಯಲ್ಲಿ ಹತ್ತೆಂಟು ದುರ್ಗುಣಗಳಿದ್ದರೂ ಅವನಲ್ಲಿರುವ ಒಂದೆ ಒಂದು ಸದ್ಗುಣವನ್ನು ಎತ್ತಿ ಹಿಡಿದು, ಬೇರೆಯವರ ಎದುರು ಸ್ತುತಿಸುತ್ತಿದ್ದರು. (**'ದೋಷಾನಶೇಷಾನ್ ಸಗುಣೀಕರೋಷಿ'**) ಅಂಥ ಉದಾತ್ತ ಮನೋಭಾವ ಅವರದು. ಈ ಸದ್ಗುಣವನ್ನು ನಾವು ಬೆಳೆಸಿ ಕೊಂಡಷ್ಟು ನಮ್ಮ ಮನಸ್ಸಿಗೆ ಶಾಂತಿ, ನೆಮ್ಮದಿ. ಅನ್ಯರ ಉನ್ನತಿಯನ್ನು ನೋಡಿ ನಾವು ಅಸೂಯೆಯಿಂದ ಕುದಿಯಬೇಕಾಗಿಲ್ಲ.

ವಿವೇಕಾನಂದರ ಜೀವನದಲ್ಲಿ ಬರುವ ಒಂದು ಪ್ರಸಂಗವನ್ನು ಇಲ್ಲಿ ಉದಾಹರಿಸಬಹುದು. ಸ್ವಾಮೀಜಿ ಲಾಹೋರಿನಲ್ಲಿದ್ದರು. ಇನ್ನೂರು ಜನರ ಮಧ್ಯೆ ಕುಳಿತು ವೇದಾಂತದ ವಿಷಯವನ್ನು ಚರ್ಚಿಸುತ್ತಿದ್ದರು. ಆ ಸಂದರ್ಭದಲ್ಲಿ ಲಾಹೋರಿನ ಒಬ್ಬ ವ್ಯಕ್ತಿಯನ್ನು ಮುಕ್ತಕಂಠದಿಂದ ಹೊಗಳಿದರು. ಅದನ್ನು ಕೇಳಿ ಸಭೆಯಲ್ಲಿದ್ದ ಒಬ್ಬರು ಹೇಳಿದರು: ''ಸ್ವಾಮೀಜಿ, ನಿಮ್ಮ ವಿಷಯದಲ್ಲಿ ಆ ವ್ಯಕ್ತಿಗೆ ಗೌರವವಿಲ್ಲ.'' ತಕ್ಷಣ ಸ್ವಾಮೀಜಿ ಉತ್ತರಿಸಿದರು: ''ಒಬ್ಬರು ಒಳ್ಳೆಯ ವ್ಯಕ್ತಿಯಾಗಲು ನನ್ನನ್ನು ಗೌರವಿಸುವ ಅಗತ್ಯವಿದೆಯೆ? ಎಂತಹ ವಿಶಾಲವಾದ ಹೃದಯ ಅವರದು. ಗುಣವಂತರು ನಮ್ಮನ್ನು ಹೊಗಳಲಿ ಅಥವಾ ಬಿಡಲಿ, ಅವರು ಗುಣವಂತರೆ.''

ಸ್ವಾಮಿ ರಂಗನಾಥಾನಂದರು ಯಾವಾಗಲೂ ಬೇರೆಯವರ ಒಳ್ಳೆಯ ಗುಣವನ್ನು ನೋಡುತ್ತಿದ್ದರು. ತಮ್ಮೆದುರಿಗೆ ಯಾರನ್ನೂ ನಿಂದಿಸಲು ಪ್ರೋತ್ಸಾಹ ಕೊಡುತ್ತಿರಲಿಲ್ಲ. ಅವರು ವಿಖ್ಯಾತರಾದ ವಾಗ್ಮಿ ಮತ್ತು ಲೇಖಕರಿದ್ದುದ್ದರಿಂದ ಅವರ ಅವಗಾಹನೆಗಾಗಿ ಅನೇಕ ಪುಸ್ತಕಗಳು ಬರುತ್ತಿದ್ದವು. ಎಲ್ಲ ಪುಸ್ತಕಗಳನ್ನು ಅವರಿಗೆ ಓದುವುದು ಸಾಧ್ಯವಿರಲಿಲ್ಲ. ಆದ್ದರಿಂದ ಒಬ್ಬ ತರುಣ ಸಂನ್ಯಾಸಿಗೆ ಕೆಲವನ್ನು ಕೊಟ್ಟು, ಅವನ ಅಭಿಪ್ರಾಯ ತಿಳಿಸಲು ಹೇಳುತ್ತಿದ್ದರು. ಆ ತರುಣ ಸಂನ್ಯಾಸಿ ಆ ಪುಸ್ತಕಗಳ ನ್ಯೂನತೆಗಳನ್ನು ಮಾತ್ರ ತಿಳಿಸುತ್ತಿದ್ದರು. ಅದನ್ನು ಕೇಳಿ ರಂಗನಾಥಾನಂದರು ವಿಷಾದದಿಂದ ವಿಚಾರಿಸುತ್ತಿದ್ದರು, ''ಆ ಪುಸ್ತಕಗಳಲ್ಲಿ ಒಂದೆರಡು ಒಳ್ಳೆಯ ಅಂಶಗಳನ್ನು ನೀನು ನೋಡಲಿಲ್ಲವೆ? ಒಂದೆರಡು ಒಳ್ಳೆಯ ಅಂಶಗಳನ್ನು ನೋಡುವುದಕ್ಕೆ ಪ್ರಯತ್ನಿಸು.'' ಈ ರೀತಿಯಾಗಿ ಅವರು ಕಿರಿಯ ಸಂನ್ಯಾಸಿಗಳ ಮನಸ್ಸನ್ನು ತಿದ್ದುತ್ತಿದ್ದರು.

**'ಅಷ್ಟಾದಶಪುರಾಣೇಷು ವ್ಯಾಸಸ್ಯ ವಚನದ್ವಯಂ ।**
**ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ ॥'**

*'ಹದಿನೆಂಟು ಪುರಾಣಗಳಲ್ಲಿ ಎರಡು ವಚನಗಳು ಬಹು ಮುಖ್ಯ: ಪರೋಪಕಾರವೇ ಪುಣ್ಯ, ಪರಪೀಡನೆಯೆ ಪಾಪ.'*

## ಅತ್ಯಂತ ಬಲಿಷ್ಠವಾದುದೇನು?

ದೇವತೆಗಳೆಲ್ಲ ಒಮ್ಮೆ ಭಗವಂತನನ್ನು ಕೇಳಿದರು : ''ಭಗವಂತ, ಕಲ್ಲಿಗಿಂತ ಕಠಿಣವಾಗಿರುವುದು ಲೋಕದಲ್ಲಿ ಯಾವುದಾದರೂ ಇದೆಯೆ?''

''ಕಬ್ಬಿಣ ಕಲ್ಲುಬಂಡೆಗಳನ್ನೂ ಪುಡಿಮಾಡಬಲ್ಲದು'' ಎಂದು ಭಗವಂತ ಉತ್ತರಿಸಿದ.

ದೇವತೆಗಳು: ''ಹಾಗಾದರೆ ಕಬ್ಬಿಣಕ್ಕಿಂತ ಕಠಿಣವಾದುದು ಬೇರೆ ಯಾವುದೂ ಇರಲು ಸಾಧ್ಯವಿಲ್ಲ!''

ಭಗವಂತ: ''ಬೆಂಕಿ ಎಂತಹ ಕಬ್ಬಿಣವನ್ನಾದರೂ ಕರಗಿಸಿ ನೀರಾಗಿಸಬಲ್ಲದು.''

ದೇವತೆಗಳು: ''ಬೆಂಕಿಯನ್ನು ಮೀರಿದ್ದು, ಪ್ರಬಲವಾದುದು ಬೇರೆ ಇಲ್ಲ ಅಲ್ಲವೆ? ಅದೇ ಅತ್ಯಂತ ಬಲಿಷ್ಠ!''

ಭಗವಂತ: ''ದೊಡ್ಡ ಕಾಡ್ಗಿಚ್ಚಿನಂತೆ ಧಗಧಗಿಸಿ ಉರಿಯುತ್ತಿರುವ ಬೆಂಕಿಯನ್ನೂ ನೀರು ತಣ್ಣಗೆ ಮಾಡಿಬಿಡುವುದು.''

ದೇವತೆಗಳು: ''ನೀರಿಗಿಂತ ಪ್ರಬಲವಾದುದು ಬೇರೆ ಯಾವುದೂ ಇಲ್ಲ ತಾನೆ!''

ಭಗವಂತ: ''ನೀರಿಗೆ ಮೂಲಕಾರಣವಾದ ಮೋಡಗಳನ್ನು ಗಾಳಿಯು ತನ್ನಿಷ್ಟ ಬಂದಂತೆ ಹಾರಿಸಿ ಬಿಡುವುದು. ನೀರು ಬೆಂಕಿಯನ್ನು ಆರಿಸುವಂತೆ ಅದರೆಡೆಗೆ ಹರಿಯಲು ಗಾಳಿಯ ಸಹಕಾರ ಬೇಕು. ಪ್ರಬಲ ಗಾಳಿ ನೀರಿನ ಹರಿವಿನ ಗತಿಯನ್ನೇ ಬದಲಿಸಿಬಿಡುವುದು.''

ದೇವತೆಗಳು: ''ಹಾಗಾದರೆ ಈ ಗಾಳಿಗಿಂತಲೂ ಬಲಿಷ್ಠವಾದುದು ಇನ್ನೇನಾದರೂ ಇದೆಯೆ?''

ಭಗವಂತ: ''ಇದೆ! ಖಂಡಿತಾ ಇದೆ. ಅದೇ ಕರುಣೆ ತುಂಬಿದ ಹೃದಯ – ಎಂತಹ ಕಠಿಣ, ಬಲಿಷ್ಠವಾದುದನ್ನೂ ಘಳಿಗೆಯಲ್ಲಿ ಕರಗಿಸಿಬಿಡುವುದು. ಕರುಣಾಪೂರ್ಣ ನಡೆ ಎಂತಹ ವಜ್ರಹೃದಯಿಯ ಹೃದಯವನ್ನೂ ಅಲುಗಾಡಿಸಬಲ್ಲುದು. ಮೃದು ಹೃದಯವೇ ಅತ್ಯಂತ ಬಲಿಷ್ಠವಾದುದು.''

*(**'ಕಲ್ಯಾಣ ಕಲ್ಪತರು'** ಮಾಸಪತ್ರಿಕೆಯಿಂದ ; ಸಂಗ್ರಹ-ಅನುವಾದ: **ಡಾ. ಕೆ. ಎಲ್. ಪ್ರಸನ್ನಾಕ್ಷೀ**)*

# ಪಂಚಕೇದಾರ ಯಾತ್ರೆ



ಸ್ವಾಮಿ ಜ್ಞಾನಯೋಗಾನಂದ


## ಭಾಗ ೨ : ಮದ್ದ ಮಹೇಶ್ವರ

**೧. ಸಾರಿಗೆ ವ್ಯವಸ್ಥೆ-ಅವ್ಯವಸ್ಥೆ :** ಮತ್ತೆ ನಮ್ಮ ಏರ್‌ಬ್ಯಾಗನ್ನು ಹೊತ್ತುಕೊಂಡು, ಲಾಠಿ ಕೈಯಲ್ಲಿ ಹಿಡಿದುಕೊಂಡು ಗೌರೀಕುಂಡ ಬಸ್ ಸ್ಟ್ಯಾಂಡ್‌ಗೆ ಬಂದೆವು. ಅಲ್ಲಿಂದ ಬದರೀನಾಥಕ್ಕೆ ಊಖೀಮಠದ ಮೂಲಕ ಹೋಗುವ ಬಸ್ ಒಂದು ೫.೩೦ ಕ್ಕೆ ಹೊರಟುನಿಂತಿತ್ತು. ಅದರಲ್ಲಿ ಎಲ್ಲ ಸೀಟ್‌ಗಳು ಬುಕ್ ಆಗಿಬಿಟ್ಟಿದ್ದವು. ಸುಮಾರು ಮೂರು ನಾಲ್ಕು ಗಂಟೆ ನಿಂತು ಪ್ರಯಾಣ ಮಾಡುವುದು ಅಸಾಧ್ಯ. ಬೇರೆ ಯಾವುದೋ ಒಂದು ಜೀಪ್‌ನವನು, ''ನೀವು ಗುಪ್ತಕಾಶಿ ತನಕ ಬನ್ನಿ. ಅಲ್ಲಿಂದ ಊಖೀಮಠಕ್ಕೆ ಜೀಪ್‌ಗಳು ಆಗಾಗ ಹೋಗುತ್ತಿರುತ್ತವೆ'' ಎಂದ. ಏನಾದರಾಗಲಿ ಎಂದು ಅವನ ಜೀಪ್ ಹತ್ತಿ ಕುಳಿತೆವು. ಉತ್ತರಾಖಂಡದಲ್ಲಿ ಇದೊಂದು ತಾಪತ್ರಯ. ಸಾರಿಗೆ ವ್ಯವಸ್ಥೆ ಚೆನ್ನಾಗಿಲ್ಲ. ಸಾಕಷ್ಟು ಮಂದಿ ಯಾತ್ರಿಕರು ಬರುತ್ತಾರೆ, ಸರ್ಕಾರಿ ಬಸ್ಸುಗಳು ಮಾತ್ರ ತೀರ ಕಡಿಮೆ. ಗಢವಾಲ, ಕುಮಾಂವೂ ವಿಕಾಸ ಮಂಡಲದವರ ಯೂನಿಯನ್ ಸಾರಿಗೆ ಬಸ್ಸುಗಳು ಬೇಕಾದಷ್ಟು ಇವೆ. ಆದರೆ ಅವರು ವರ್ತಿಸುವ ರೀತಿ ನೋಡಿದರೆ, ಯಾತ್ರಿಕರೆಲ್ಲ ಕತ್ತೆಗಳು, ತಾವು ಮಾತ್ರ ದೇವದೂತರು ಎಂಬ ರೀತಿ.

ಜೀಪ್ ಭರ್ತಿಯಾಗಲು ಅರ್ಧಗಂಟೆ ಹಿಡಿಯಿತು. ೬ ಗಂಟೆಗೆ ಗೌರೀಕುಂಡದಿಂದ ಹೊರಟು, ಗುಪ್ತಕಾಶಿ ತಲುಪುವಾಗ ೮.೧೫ ಆಗಿಬಿಟ್ಟಿತ್ತು. ಗೌರೀಕುಂಡದಲ್ಲಿ ಯಾವಾಗಲೂ ಟ್ರಾಫಿಕ್ ಜಾಮ್ ಆಗುತ್ತಿರುತ್ತದೆ. ಅಲ್ಲಿ ಸಾಲಾಗಿ ಎರಡೂ ಬದಿಗಳಲ್ಲಿ ನಿಂತ ವಾಹನಗಳನ್ನೆಲ್ಲಾ ದಾಟಿ ಬರುವಾಗ ಎಷ್ಟೋ ಸಲ ಟ್ರಾಫಿಕ್ ಜಾಮ್ ಆಗಿ ಅರ್ಧಗಂಟೆ, ಒಂದುಗಂಟೆ, ಎರಡುಗಂಟೆ ಕಾಯಬೇಕಾಗುವುದು. ಇಂದು ಯಾಕೋ ನಮ್ಮ ಅದೃಷ್ಟ ಚೆನ್ನಾಗಿತ್ತು. ಬೇಗ ಗೌರೀಕುಂಡದ ಟ್ರಾಫಿಕ್ ದಾಟಿ, ಸುಮಾರು ಎರಡು ಗಂಟೆಯ ಅವಧಿಯಲ್ಲಿ ಗುಪ್ತಕಾಶಿ ತಲುಪಿದ್ದೆವು. ಗುಪ್ತಕಾಶಿಯಿಂದ ನಿಂತು ನೋಡಿದರೆ ಉತ್ತರ ದಿಕ್ಕಿಗೆ ಚೌಖಂಬಾ ಪರ್ವತಸಾಲು ಹಿಮಾಚ್ಛಾದಿತವಾಗಿ ಮೇಲಕ್ಕೆ ತಲೆಯೆತ್ತಿ ನಿಂತಿರುವುದು ಕಾಣಿಸುತ್ತಿತ್ತು. ಅದರ ಸೊಬಗು, ಆಕಾಶ ತಿಳಿಯಾಗಿದ್ದರೆ ಮಾತ್ರ ಕಾಣಿಸಬಹುದು. ಅದನ್ನು ನೋಡಿ ಕರುಣಾಕರಾನಂದಜಿ, ''ನಾವು ಆ ದಾರಿಯಲ್ಲೇ ಹೋಗಬೇಕಾಗಿದೆ'' ಎಂದರು. ಅದನ್ನು ನೋಡಿದ ನನಗೆ ಉತ್ಸಾಹ ಇಮ್ಮಡಿಸಿತು. ಗುಪ್ತಕಾಶಿಯಲ್ಲಿ ಇಳಿದು ವಿಚಾರಿಸಿದಾಗ ೮.೩೦ ಗಂಟೆಗೆ ಊಖೀಮಠಕ್ಕೆ ಒಂದು ಜೀಪ್ ಹೊರಡುವುದಾಗಿ ತಿಳಿದು ಬಂತು. ನಾವು ಅದನ್ನೇರಿ ಕುಳಿತುಬಿಟ್ಟೆವು. ಜೀಪ್‌ಗಳೇನೋ ವೇಗವಾಗಿ ಸಾಗುತ್ತವೆ. ಸಾಕಷ್ಟು ತಿರುವುಗಳಿಂದ, ಏರು-ತಗ್ಗುಗಳಿಂದ ಕೂಡಿದ ರಸ್ತೆಯಲ್ಲಿ ಅವು ಚುರುಕಾಗಿ ಸಾಗುತ್ತವೆ; ಆದರೆ ಅದು ಹೊರಡಲು ಜನ ಭರ್ತಿಯಾಗುವವರೆಗೂ ಕಾಯಬೇಕು. ಕೊನೆಗೂ ಜೀಪ್ ಹೊರಟಿತು. ಸುಮಾರು ೯.೦೦ ಗಂಟೆಗೆ ನಮ್ಮ ಜೀಪ್ ಊಖೀಮಠ ತಲುಪಿತು.

ಊಖೀಮಠದಲ್ಲಿ ಹಳೆಯ ಒಂದು ವೀರಶೈವ ಮಂದಿರವಿದೆ ಎಂದು ಕೇಳಿದ್ದೆವು. ಮರಳಿ ಬರುವಾಗ ಅದನ್ನು ನೋಡಬಹುದು; ಮೊದಲು ಪಂಚಕೇದಾರದ ದೇವಸ್ಥಾನಗಳನ್ನು ನೋಡುವುದು ಮುಖ್ಯ; ಹಾಗಾಗಿ ಮದ್ದಮಹೇಶ್ವರ* ನೋಡಿ ಬರೋಣ ಎಂದ ಕರುಣಾಕರಾನಂದರ ಮಾತು ನನಗೂ ಸರಿ ಎನ್ನಿಸಿತು. 'ಹೋಟೆಲ್ ದೇವಭೂಮಿ'ಯಲ್ಲಿ ತಿಂಡಿ ಮಾಡಿ, ಮುಂದಿನ ಪ್ರಯಾಣದ ಬಗ್ಗೆ

* ಮೂಲ ಶಬ್ದ 'ಮಧ್ಯಮಹೇಶ್ವರ', ಹಿಂದಿಯಲ್ಲಿ ಅದನ್ನು *ಮದ್ದ್‌ಮಹೇಶ್ವರ್* ಎನ್ನುತ್ತಾರೆ.



ಊಖೀಮಠದಿಂದ ಕಾಣುವ ದೃಶ್ಯ

ಕ್ಯಾಶಿಯರ್‌ನನ್ನೇ ಕೇಳಿದೆವು. ಅವನು, ''ಉನಿಯಾಣಾ ತನಕ ಜೀಪು ಹೋಗುತ್ತದೆ. ನೀವು ಇಲ್ಲೇ ಮುಂದೆ ಹೋಗಿ, ಅದೋ ಅಲ್ಲಿ ಜೀಪ್‌ಗಳೆಲ್ಲ ನಿಂತಿವೆಯಲ್ಲ, ಅಲ್ಲಿಗೆ ಹೋಗಿ ವಿಚಾರಿಸಿ. ಸ್ವಲ್ಪ ಹೊತ್ತಿನಲ್ಲೇ ಒಂದು ಜೀಪ್ ಹೊರಡುತ್ತದೆ'' ಎಂದ. ಮುಂದೆ ತಂಗುವುದೆಲ್ಲಿ ಎಂದು ವಿಚಾರಿಸಿದಾಗ ಅವನು ಒಂದು ವಿಸಿಟಿಂಗ್ ಕಾರ್ಡ್ ಕೊಟ್ಟ. ''ಗೌಂಡರ್ ಅಂತ ಒಂದು ಗ್ರಾಮ ಸಿಗುತ್ತದೆ. ಅಲ್ಲಿಂದ ಒಂದು ಕಿ.ಮೀ. ಮುಂದಕ್ಕೆ ಹೋದರೆ ಒಂದು ಲಾಡ್ಜ್ ಇದೆ – 'ಹೋಟೆಲ್ ವಿಶ್ವ' ಅಂತ. ಅಲ್ಲೇ ಇಳಿದುಕೊಳ್ಳಿ. ನಾನು ಕಳುಹಿಸಿದೆ ಅಂತ ಹೇಳಿ'' ಎಂದ. ಜೀಪ್‌ಗಳೆಲ್ಲ ನಿಂತಿರುವ ಜಾಗಕ್ಕೆ ಬಂದು ನೋಡಿದೆವು. ಒಬ್ಬ ಡ್ರೈವರ್‌ನನ್ನು ವಿಚಾರಿಸಿದಾಗ ಅವನು ತುದಿಯಲ್ಲಿರುವ ಒಂದು ಜೀಪ್‌ನತ್ತ ತೋರಿಸಿ, ''ಅದು ಹೋಗುತ್ತದೆ'' ಎಂದ. ಅದೊಂದು ವಿಚಿತ್ರ ಜೀಪ್. ಜೀಪ್‌ನ ಹಿಂಭಾಗಕ್ಕೆ ಲಗೇಜ್ ಕ್ಯಾರಿಯರ್ ಅನ್ನು ಜೋಡಿಸಲಾಗಿತ್ತು. ಆದರೆ ಅದರ ಒಳಭಾಗದಲ್ಲಿ ಸೀಟುಗಳಿದ್ದವು. ಲಗೇಜ್ ಚೆನ್ನಾಗಿ ಹಾಕಲೂ ಸಾಧ್ಯವಾಗಬೇಕು; ಹೆಚ್ಚು ಜನರೂ ಹೋಗುವಂತಾಗಬೇಕು. ಒಳ್ಳೆಯ ಉಪಾಯ!

ಡ್ರೈವರ್‌ನನ್ನು ವಿಚಾರಿಸಿದೆವು, ''ಉನಿಯಾಣಾಗೆ ಹೋಗುತ್ತದಾ ಭಾಯಿ?'' ಅದಕ್ಕೆ ಅವನೆಂದ, ''ಹೋಗುತ್ತದೆ, ಆದರೆ ಮುಂಭಾಗದಲ್ಲಿ ಜಾಗವಿಲ್ಲ, ಹಿಂದೆ ಕುಳಿತುಕೊಳ್ಳಬೇಕು.'' ಪರವಾಗಿಲ್ಲ, ಹೇಗಾದರೂ ಅಲ್ಲಿಯತನಕ ಬಿಟ್ಟುಬಿಡು ಮಹರಾಯ ಎಂದುಕೊಂಡು ಹಿಂದೆ ಲಗೇಜ್ ಕ್ಯಾರಿಯರ್ ಕ್ಯಾಬಿನ್‌ನನ್ನು ಹತ್ತಿ ಕುಳಿತೆವು. ಹೆಚ್ಚು ಕಡಿಮೆ ಜನ ಭರ್ತಿಯಾಗಿದ್ದರೂ ಅವನು ಜೀಪ್ ಬಿಡುತ್ತಿಲ್ಲ. ಇದೇನೆಂದು ನೋಡಿದರೆ, ಅವನು ಜೀಪ್ ಸ್ಟಾರ್ಟ್ ಮಾಡಿ ಮತ್ತೆ 'ಹೋಟೆಲ್ ದೇವಭೂಮಿ'ಯತ್ತ, ಅಂದರೆ ನಾವು ಹೊರಟಲ್ಲಿಗೇ ಬಂದ. ಅಲ್ಲಿ ಒಂದು ಅಂಗಡಿಯ ಮುಂದೆ ನಿಲ್ಲಿಸಿದ. ಇಬ್ಬರು ಮೂವರು ತರುಣರು ಒಂದು ದೊಡ್ಡ ಮರದ ಮಂಚವನ್ನು ತರುತ್ತಿದ್ದರು. ಆಯಿತು ಕತೆ, ಅದನ್ನು ಜೀಪ್ ಮೇಲೆ ಹೇರುತ್ತಾರೆ ಎಂದುಕೊಂಡೆವು. ನೋಡ ನೋಡುತ್ತಿದ್ದಂತೆ ಕ್ಯಾಬಿನ್ನಿನ ಟಾಪ್ ಮೇಲೆ ಅದನ್ನು ಏರಿಸಿಯೇಬಿಟ್ಟರು. ಅಲುಗಾಡದಂತೆ ಹಗ್ಗ ಬಿಗಿದು ಕಟ್ಟಿ, ಮತ್ತೆ ಜೀಪ್ ಹೊರಟಿತು. ಕೊನೆಗೂ ಹೊರಟರಲ್ಲಾ ಎಂದು ನಿಟ್ಟುಸಿರುಬಿಟ್ಟೆವು.

ಮುಂದೆ ಜೀಪ್ ಸಾಗುತ್ತಿದ್ದಂತೆ ಪ್ರಕೃತಿಯ ರಮಣೀಯ ದೃಶ್ಯವನ್ನು ನೋಡುತ್ತ ಮೈಮರೆತೆವು. ಜನಜಂಗುಳಿಯಿಂದ ತುಂಬಿದ ಪ್ರಸಿದ್ಧ ಯಾತ್ರಾಸ್ಥಳಗಳು ಸಾಮಾನ್ಯವಾಗಿ ಗದ್ದಲದಿಂದ ಕೂಡಿರುತ್ತವೆ. ಅದರಲ್ಲೂ ಪಹಾಡಿಗಳ ಗದ್ದಲ, ಗಲೀಜು, ಗ್ರಾಮ್ಯ ನಡವಳಿಕೆ ಇವೆಲ್ಲ ಬೇಸರ ಹುಟ್ಟಿಸುತ್ತದೆ. ಅವನ್ನೆಲ್ಲ ದಾಟಿ ಹಿಮಾಲಯದ ಒಳಭಾಗವನ್ನು ಹೊಕ್ಕರೆ ಅರ್ಥವಾದೀತು, ಅದೆಂಥ ಅಪೂರ್ವ ಜಗತ್ತು ಎಂಬುದಾಗಿ. ಅಲ್ಲಿನ ಜನಜೀವನವನ್ನೆಲ್ಲ ಪರ್ವತಗಳು ಆವರಿಸಿಬಿಟ್ಟಿವೆ. ಕ್ಷಣಕ್ಷಣಕ್ಕೂ ಬದಲಾಗುವ ಹವಾಮಾನ, ಉನ್ನತ ಶಿಖರಗಳು, ನದಿ, ಯಾವಾಗಲೆಂದರೆ ಸುರಿಯುವ ಮಳೆ ಇವೆಲ್ಲ ಅವರ ಮಾತುಕತೆಯ ನಡುವೆ ಆಗಾಗ ಇರುತ್ತವೆ. ಹಾವಿನಂತೆ ಸುತ್ತಿ ಬಳಸಿ ಮುಂದುವರಿಯುತ್ತಿದ್ದ ರಸ್ತೆಗಳಲ್ಲಿ ಜೀಪ್ ಸಾಗುತ್ತಿದ್ದಂತೆ, ಇಕ್ಕೆಲದಲ್ಲಿ ನಿಬಿಡವಾಗಿ ಹಬ್ಬಿದ ಹಸಿರು, ಅಲ್ಲಲ್ಲಿ ಹಿಮಾಲಯಕ್ಕೇ ವಿಶಿಷ್ಟವಾದ ಗುಡ್ಡಗಾಡಿನ ತಟ್ಟುತಟ್ಟಾದ ಗದ್ದೆಗಳು, ಪಕ್ಕದಲ್ಲಿ ಒಂದೆರಡು ಮನೆ ಇವೆಲ್ಲ ಕಾಣಿಸಿದವು. ಅಲ್ಲೊಂದು ರಸ್ತೆ ನಿರ್ಮಾಣವಾಗುತ್ತಿತ್ತು. ಬಹುಶಃ, ಗೌಂಡರ್ ಎಂಬ ಗ್ರಾಮದವರೆಗೂ ಅದನ್ನು ವಿಸ್ತರಿಸುತ್ತಿದ್ದಾರೆ. ಈಗಾಗಲೇ ಉನಿಯಾಣದಿಂದ ಮುಂದಕ್ಕೆ ರಾಂಸಿ ಎಂಬ ಊರಿನ ತನಕ ರಸ್ತೆ ನಿರ್ಮಾಣವಾಗಿದೆ. ಆದರೆ ಜೀಪ್ ಅದಕ್ಕಿಂತಲೂ ೧ ಕಿ.ಮೀ. ಹಿಂದಕ್ಕೆ ಗುಡಕನ್‌ಧಾರಾ ಎಂಬ ಜಾಗದವರೆಗೆ ಮಾತ್ರ ಬರುತ್ತದೆ. ಅದು ಉನಿಯಾಣಾದಿಂದ ಸ್ವಲ್ಪ ಮುಂದಕ್ಕೆ ಇದೆ. ಅಲ್ಲಿ ನೇಪಾಳೀ ಕೆಲಸಗಾರರು ಅಲ್ಲಿ ಒಂದೆಡೆ ಕಲ್ಲು ಒಡೆಯುವ, ಸೇತುವೆಯನ್ನು ನಿರ್ಮಿಸುವ ಕೆಲಸದಲ್ಲಿ ತೊಡಗಿಕೊಂಡದ್ದನ್ನು ನಾವು ಕಂಡಿದ್ದೆವು.

**೨. ಉನಿಯಾಣಾ :** ಜೀಪ್ ಮುಂದುವರಿದು ಸಾಗುತ್ತಿತ್ತು. ನಡುವೆ ಮಧುಗಂಗಾ ಎಂಬ ನದಿ ಎದುರಾಯಿತು. ಅದು ಚೌಖಂಬಾ ಪರ್ವತದಿಂದ ಹುಟ್ಟಿ ಹರಿಯುತ್ತ, ಮುಂದೆ ಕೇದಾರನಾಥದಿಂದ ಹರಿದು ಬರುವ ಮಂದಾಕಿನೀ ನದಿಯನ್ನು ಸೇರುತ್ತದೆ. ಮಧುಗಂಗಾ ನದಿಯುದ್ದಕ್ಕೂ ಬಂಡೆಗಳಿವೆ; ಹಸಿರು ಕಾಡು, ನೀಲಿಯ ಆಗಸ ಹಾಗೂ ಇಬ್ಬದಿಯ ಬಿಳಿ ಮರಳು ಇವುಗಳ ನಡುವೆ ನೊರೆನೊರೆಯಾಗಿ ಧುಮುಕುತ್ತಾ ಕಾಣುವ ಈ ನದಿಯ ಸೌಂದರ್ಯ ಅಸಾಧಾರಣ.ಉನಿಯಾಣಾಗೆ ಸ್ವಲ್ಪ ಮೊದಲು ಜೀಪ್ ನಿಂತಿತು. ಕ್ಯಾಬಿನ್ನಿನ ಮೇಲಿದ್ದ ಭಾರವಾದ ಮಂಚವನ್ನು ಅಲ್ಲಿ ಇಳಿಸಿದರು. ಅಲ್ಲಿ ಸಣ್ಣ ಪುಟ್ಟ ಅಂಗಡಿಗಳಿವೆ. ಒಂದು ಹೊಸ ಕಟ್ಟಡ, ಬಹುಶಃ ಅದೂ ಅಂಗಡಿ ಇರಬೇಕು, ಅಲ್ಲಿಗೆ ಮಂಚವನ್ನು ಸಾಗಿಸಿದರು. ಮತ್ತೆ ನಮ್ಮ ಜೀಪ್ ಹೊರಟಿತು. 'ಉನಿಯಾಣಾ' ಎಂದು ಬರೆದ ಒಂದು ಫಲಕವನ್ನು ಕಂಡಾಗ ನಾವು 'ಇಳಿಯಬೇಕು' ಎಂದುಕೊಳ್ಳುತ್ತಾ ತಯಾರಾದೆವು. ಆದರೆ ಉನಿಯಾಣಾ ದಾಟಿ ಇನ್ನೂ ಒಂದರ್ಧ ಮೈಲಿ ಜೀಪ್ ಸಾಗಿ, ಗುಡಕನ್‌ಧಾರಾ ಎಂಬಲ್ಲಿಯವರೆಗೂ ಬಂತು. ಕೊನೆಯ ತಂಗುದಾಣದಲ್ಲಿ ಜೀಪ್ ನಿಂತಾಗ ಕೆಳಗಿಳಿದ ನಾವು ನಮ್ಮ ಲಗೇಜ್, ದಂಡ ಇವುಗಳೊಂದಿಗೆ ರಸ್ತೆ ಬದಿಯಲ್ಲಿದ್ದ ಒಂದು ಚಹಾದಂಗಡಿಗೆ ಹೋದೆವು. ಅಲ್ಲಿ ಚಹಾ ಕುಡಿದು ಒಂದೊಂದೇ ಜೊತೆ ಬಟ್ಟೆಬರೆ, ಇನ್ನಿತರ ಕೆಲವು ವಸ್ತುಗಳು, ಔಷಧಿ ಇತ್ಯಾದಿಗಳನ್ನು ಹೆಗಲಚೀಲಕ್ಕೆ ತುಂಬಿಕೊಂಡೆವು. ಉಳಿದ ಸಾಮಾನುಗಳನ್ನೆಲ್ಲ ಏರ್‌ಬ್ಯಾಗ್‌ನಲ್ಲಿ ತುಂಬಿ, ಅದನ್ನು ಅವನ ಅಂಗಡಿಯಲ್ಲೇ ಇಟ್ಟೆವು. ಹೆಗಲಚೀಲ, ದಂಡ – ಇವಿಷ್ಟೇ ನಮ್ಮ ಸಂಗಾತಿ.

ಮುಂದಿನ ಪಯಣ ಹೇಗೆ? ಆ ಹೋಟೆಲಿನವನನ್ನೇ ಕೇಳಿದೆವು. ಅವನು ಒಂದು ಕಾಲುದಾರಿಯನ್ನು ತೋರಿಸಿ, ''ಅದರಲ್ಲೇ ನೇರ ಹೋಗಿ, ನಿಮಗೇ ಮುಂದಕ್ಕೆ ಗೊತ್ತಾಗುತ್ತದೆ'' ಎಂದ. ನಾವು

ಉತ್ಸಾಹದಿಂದ ನಡೆಯತೊಡಗಿದೆವು. ಕಾಲುದಾರಿ ಮುಂದಕ್ಕೆ ಸಾಗುತ್ತ ಒಂದೆಡೆ ಮಣ್ಣಿನ ರಸ್ತೆಯಲ್ಲಿ ಒಂದಾಯಿತು. ಇನ್ನೂ ರಸ್ತೆ ನಿರ್ಮಾಣ ಪೂರ್ಣಗೊಂಡಿರಲಿಲ್ಲ. ರಸ್ತೆಯಲ್ಲೇ ಮುಂದೆ ಹೋಗುತ್ತಿರಬೇಕಾದರೆ ಅಲ್ಲಿ ರಸ್ತೆ ಕೆಲಸ ಕಂಟ್ರಾಕ್ಟ್ ತೆಗೆದುಕೊಂಡಿದ್ದ ಒಬ್ಬ ವ್ಯಕ್ತಿ ನಮ್ಮೊಂದಿಗೆ ಸೇರಿಕೊಂಡ. ಅವನು ರಾಂಸಿ ಎಂಬ ಊರಿನಲ್ಲಿ ವಾಸ ಮಾಡುತ್ತಾನೆ. ಅವನು ಆ ಊರಿನ ಬಗ್ಗೆ, ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ಕೊಟ್ಟ. ನಡೆಯುತ್ತಾ ರಾಂಸಿ ತಲುಪಿದೆವು. ಅದೊಂದು ಸಣ್ಣ ಊರು, ಸಾಕಷ್ಟು ಮನೆಗಳಿವೆ. ನಾಲ್ಕೈದು ಅಂಗಡಿಗಳೂ ಇದ್ದವು. ಅಲ್ಲಿ 'ರಾಕೇಶ್ವರಿ' ಎಂಬ ದೇವಿಯ ಮಂದಿರವಿದೆ. ಪ್ರಾಚೀನ ಕಾಲದಲ್ಲಿ ಮದ್ದಮಹೇಶ್ವರದ ಯಾತ್ರೆ ಕೈಗೊಂಡ ಬಂಗಾಳಿ ಸಾಧುವೊಬ್ಬ ಈ ಊರಲ್ಲಿ ತಂಗಿ, ರಾಕೇಶ್ವರೀ ದೇವಿಯ ದರ್ಶನ ಪಡೆದನೆಂದು ದಂತಕತೆ ಹೇಳುತ್ತದೆ. ಆದರೆ ಹೋಗುವ ಅಥವಾ ಬರುವ ಸಂದರ್ಭದಲ್ಲಿ ನಾವೇಕೆ ಈ ದೇಗುಲವನ್ನು ನೋಡದೆ ಹೋದೆವೋ! ಬಹುಶಃ ಪಂಚಕೇದಾರವಷ್ಟೇ ನಮ್ಮ ದೃಷ್ಟಿಯಲ್ಲಿದ್ದುದರಿಂದ ಇರಬೇಕು.

ನಡೆಯುತ್ತಾ ಹೋದಂತೆ ಕಡಿಮೆ ಎತ್ತರವಾದ ಬೆಟ್ಟಗಳನ್ನು ಏರಬೇಕು, ಹಾಗೆಯೇ ಇಳಿಯಬೇಕು. ಬಹುತೇಕ ಬೆಟ್ಟದ ಸೆರಗಿನಲ್ಲೇ ದಾರಿ ಸಿಗುತ್ತದೆ. ನಡೆಯುತ್ತಾ ಹೋದರೆ ಆಯಾಸವಾಗುತ್ತಿತ್ತು. ಆದರೂ ನಾವು ನಿರ್ಧರಿಸಿರುವ ಸ್ಥಳ ತಲುಪುವವರೆಗೂ ನಿಲ್ಲದೆ ಮುಂದುವರಿದೆವು. ಒಂದೆಡೆ ತುಂಬ ದಟ್ಟವಾದ ಕಾಡಿನ ನಡುವೆ ಸಾಗಬೇಕಾಯಿತು. ದಾರಿಯಲ್ಲಿ ಇಂಬಳಗಳು ಇದ್ದೀತೋ ಎಂಬ ಭಯವಾಯಿತು. ಅದು ಕಾಲಿಗೆ ಹತ್ತಿಬಿಟ್ಟರೆ ಗೊತ್ತಾಗುವುದೇ ಇಲ್ಲ. ಹತ್ತಿದ ಕೂಡಲೇ ರಕ್ತ ಹೀರಿಬಿಡುತ್ತದೆ, ತುಂಬ ಅಪಾಯಕಾರಿ ಹುಳ. ಆದರೆ ಅಲ್ಲೆಲ್ಲೂ ಇಂಬಳ ಕಾಣಿಸಲಿಲ್ಲ. ನಡುನಡುವೆ ಪೊದೆಗಳು ಎದುರಾಗುತ್ತವೆ, ಮಧುಗಂಗಾ ನದಿ ಜುಳುಜುಳು ಎನ್ನುತ್ತಾ ಸಾಗುತ್ತದೆ, ಅದರ ಇನ್ನೊಂದು ದಡದಲ್ಲಿ ಕಡಿದಾದ ಪರ್ವತ ತಲೆಯೆತ್ತಿ ನಿಂತಿದೆ. ಅದರ ಎತ್ತರ ನೋಡಿದರೇನೇ ಮೈ ಜುಂ ಎನಿಸುತ್ತದೆ. ಅಷ್ಟೇನೂ ಜನ ವಸತಿಯಿಲ್ಲ, ದುರ್ಗಮವಾದ ಪರ್ವತದ ಮೇಲೆಲ್ಲಾ ದಟ್ಟವಾದ ಕಾಡು ತುಂಬಿಕೊಂಡಿದೆ. ಕೆಲವೆಡೆ ಮರಗಳಿಲ್ಲ ; ಬರೀ ಬಂಡೆ ಕಪ್ಪಾಗಿ ಕಾಣಿಸುತ್ತಿತ್ತು. ಒಂದು ಸುಂದರ ತಾಣದಲ್ಲಿ ತುಂಬ ತಗ್ಗಿನಲ್ಲಿ ನದಿ ಹರಿಯುತ್ತಿರುವುದು  ಕಾಣಿಸುತ್ತಿತ್ತು. ನದಿಯ ದಡದಲ್ಲಿ ಅರಣ್ಯಗಳಿಂದ ಕೂಡಿದ ಒಂದು ಸಮತಟ್ಟು ಪ್ರದೇಶವನ್ನು ನೋಡಿ ಸ್ವಾಮಿ ಕರುಣಾಕರಾನಂದರು, ''ಅಲ್ಲೇ ಒಂದು ಕುಟೀರ ಕಟ್ಟಿಬಿಟ್ಟರೆ, ಚೆನ್ನಾಗಿರುತ್ತದೆ'' ಎಂದರು. 'ಸರಿ' ಎಂದೆ ನಾನು. ಸುಂದರ ತಾಣಗಳನ್ನು ನೋಡುವಾಗ ತುಂಬಾ ಆಲೋಚನೆಗಳೇನೋ ಬರುತ್ತವೆ. ಆದರೆ ಅಲ್ಲಿನ ಕಷ್ಟಕರ ಜೀವನವನ್ನು ನೋಡಿದಾಗ ಅದೇನೂ ಅಷ್ಟು ಸುಲಭವಲ್ಲ ಎಂಬ ವಾಸ್ತವ ಮನದಟ್ಟಾಗುತ್ತದೆ.

**೩. ಗೌಂಡರ್ – ಬಾಂತೋಲಿ :** ತುಂಬ ದೂರ ನಡೆಯುತ್ತಾ ಬಂದೆವು. ಇನ್ನೂ ಗೌಂಡರ್ ಎಂಬ ಊರು ಬಂದಿಲ್ಲ. ಅಲ್ಲಿಂದ ಒಂದು ಕಿ.ಮೀ. ಮುಂದಕ್ಕೆ ನಾವು ಇಳಿದುಕೊಳ್ಳಬೇಕಾದ ಸ್ಥಳ ಇರುವುದು. ಸಮಯ ಮಧ್ಯಾಹ್ನ ಸುಮಾರು ಒಂದು ಗಂಟೆ. ನಮಗೆ ಚಿಂತೆ ಶುರುವಾಗತೊಡಗಿತು. ನಡೆದು ನಡೆದು ತುಂಬಾ ಆಯಾಸ ಬೇರೆ. ಅಷ್ಟರಲ್ಲಿ ಒಂದು ಸುಂದರವಾದ ದೃಶ್ಯ ನಮ್ಮ ಕಣ್ಣಿಗೆ ಬಿದ್ದಿತು. ಒಂದು ಸಣ್ಣ ತೊರೆ, ಅದಕ್ಕೆ ಕಟ್ಟಿದ ಕಬ್ಬಿಣದ ಸೇತುವೆ – ಸೇತುವೆಯೇನೋ ಬಲವಾಗಿದೆ; ಇನ್ನೊಂದು ಬದಿಯಲ್ಲಿ ಎತ್ತರದಿಂದ ಕೆಳಕ್ಕೆ ಧುಮುಕುವ ಝರಿ. ಕೆಳಕ್ಕೆ ಬಿದ್ದ ನೀರು ಸುಂದರವಾದ ಒಂದು ಮಡುವಿನಲ್ಲಿ ಒಂದಾಗಿಬಿಡುತ್ತಿತ್ತು. ಮಡುವಿನ ಇನ್ನೊಂದು ತುದಿಯಿಂದ ಹರಿದ ನೀರು ಸೇತುವೆಯ ಕೆಳಗಿನಿಂದ ಸಾಗಿ, ಕಾಡಿನ ನಡುವೆ ಕಲ್ಲುಬಂಡೆಗಳ ನಡುವೆ ಲಾಸ್ಯವಾಡುತ್ತಾ ಸಾಗುತ್ತಿತ್ತು. ಮಡುವಿನ ನೀರು ಎಷ್ಟೊಂದು ಸ್ವಚ್ಛವೆಂದರೆ, ತಳದಲ್ಲಿ ಹರಿದಾಡುವ ಮೀನುಗಳು ಥಳಥಳನೆ ಹೊಳೆಯುತ್ತಿದ್ದವು. ಸೇತುವೆಯ ಮೇಲೆ ನಿಂತು ನಾವಿಬ್ಬರೂ ಸ್ವಲ್ಪ ಹೊತ್ತು ಆ ದೃಶ್ಯವನ್ನು ನೋಡಿದೆವು.



ಗೌಂಡರ್ ಹಳ್ಳಿ

ಇನ್ನೂ ಸ್ವಲ್ಪದೂರ ಸಾಗುವಷ್ಟರಲ್ಲಿ ಒಂದು ತಂಗುದಾಣದಲ್ಲಿ 'ಗೌಂಡರ್ ಗಾಂವ್ ೨ ಕಿ.ಮೀ.' ಎಂದು ಹಿಂದಿಯಲ್ಲಿ ಬರೆದಿದ್ದದು ಕಾಣಿಸಿ, ನಮಗೆ ತುಸು ಸಮಾಧಾನವಾಯಿತು, ಸರಿಯಾದ ದಾರಿಯಲ್ಲೇ ಬಂದಿದ್ದೇವೆ ಎಂದು. ಒಂದರ್ಧ ಗಂಟೆಯೊಳಗಾಗಿ ಹತ್ತಾರು ಮನೆಗಳಿದ್ದ, ಕೆಲವು ಅಂಗಡಿ, ಹೋಟೆಲುಗಳಿದ್ದ ಒಂದು ಸಣ್ಣ ಹಳ್ಳಿ ಎದುರಾಯಿತು. ಅದೇ 'ಗೌಂಡರ್' ಹಳ್ಳಿ. ಅಲ್ಲಿಗೆ ನಾವು ತಲುಪುತ್ತಿದ್ದಂತೆ ರಸ್ತೆಗೆ ತುಸು ಎತ್ತರವಾಗಿ ನಿರ್ಮಾಣಗೊಂಡಿದ್ದ ಒಂದು ಹೋಟೆಲಲ್ಲಿ ಈಗಾಗಲೇ ತಳವೂರಿದ್ದ ಕೆಲವು ಯಾತ್ರಿಕರು ಕಾಣಿಸಿಕೊಂಡರು. ಅಲ್ಲಿ ಒಬ್ಬಾತ ಯಾತ್ರಿಕ ನಮ್ಮತ್ತ ನೋಡಿ ಕೈಮುಗಿದು, 'ನಮಸ್ತೇ ಮಹರಾಜ್ ಜೀ' ಎಂದ. ಬಹುಶಃ ನಾವೂ ಅದೇ ಹೋಟೇಲಿನಲ್ಲಿ ಇಳಿದುಕೊಳ್ಳುತ್ತೇವೆ ಎಂದು ಅವನು ಅಂದುಕೊಂಡನೋ ಏನೋ. ನಾವು ಮುಂದುವರಿಯುತ್ತಿದ್ದಂತೆ ಆತ, 'ಆಜ್ ಯಹ್ಲಾಂ ರುಕ್‌ನಾ' ('ಇಂದು ಇಲ್ಲೇ ಇಳಿದುಕೊಳ್ಳಬೇಕು') ಎಂದ. ನಾವು ಅವನ ಸಲಹೆಗೆ ಕ್ಯಾರ್ ಮಾಡದೆ ಮುಂದುವರಿದೆವು. ನಮ್ಮ ಗುರಿ ಇನ್ನೂ ಒಂದು ಕಿ.ಮೀ. ಮುಂದಕ್ಕೆ 'ಹೋಟೆಲ್ ವಿಶ್ವ', ಊಖೀಮಠದಲ್ಲಿನ ಹೋಟೆಲಿನವನು ಹೇಳಿದ ಸ್ಥಳಕ್ಕೆ ಹೋಗುವುದು. ಅಲ್ಲಿಂದ ಮುಂದಕ್ಕೆ ಮದ್ದಮಹೇಶ್ವರ ಯಾತ್ರೆಗೆ ಮಾರ್ಗದರ್ಶಿಯೊಬ್ಬನನ್ನು ಗೊತ್ತುಮಾಡುವುದು ಅತ್ಯವಶ್ಯ. 'ವಿಶ್ವ' ಹೋಟೆಲಿನವನು ಮಾರ್ಗದರ್ಶಿಯನ್ನು ಗೊತ್ತು ಮಾಡಿಕೊಡುತ್ತಾನೆ ಎಂದಿದ್ದ ಊಖೀಮಠದ ಹೋಟೇಲಿನ ಹುಡುಗ. ಆದ್ದರಿಂದ ಅವನ ಪರಿಚಯದ ಲಾಭ ಕಳೆದುಕೊಳ್ಳುವುದು ನಮಗಿಷ್ಟವಿರಲಿಲ್ಲ.

ಆದರೆ ಸ್ವಲ್ಪ ಮುಂದಕ್ಕೆ ಹೋಗುವಷ್ಟರಲ್ಲಿ ಗುಡ್ಡದ ತುದಿಯಲ್ಲೊಂದು ಕಟ್ಟಡ ಕಾಣಿಸುತ್ತಿತ್ತು. ಅದೇ ನಾವು ಇಳಿದುಕೊಳ್ಳಬೇಕಾದ ಸ್ಥಳ ಎಂದರು ಸ್ವಾಮಿ ಕರುಣಾಕರಾನಂದರು. ನನಗೆ ಅವರ ಮಾತಿನಲ್ಲಿ

ನಂಬಿಕೆಯಾಗಲಿಲ್ಲ. ಇನ್ನೂ ಮೇಲಕ್ಕೆ ಹತ್ತಿ ಹೋಗಬೇಕೇನೋ ಎಂದುಕೊಂಡೆ. ಕಾರಣ, ನಡೆದು ತೀರಾ ಆಯಾಸಗೊಂಡಿದ್ದ ನಮಗೆ ಈಗ ಇದ್ದಕ್ಕಿದ್ದಂತೆ ಎದುರಾದ ಏರುದಾರಿ ತೀರ ಕಷ್ಟಕರವೆನಿಸಿತ್ತು. ಅಂತೂ ಆ ಕಟ್ಟಡವನ್ನು ತಲುಪಿದಾಗ ಅಲ್ಲೊಂದು ಬೋರ್ಡ್ ಕಾಣಿಸಿತು. ಅದರಲ್ಲಿ 'ಹೋಟೆಲ್ ವಿಶ್ವ' ಎಂದು ಬರೆದಿತ್ತು. ಕೊನೆಗೂ ಬಂದು ತಲುಪಿದೆವಲ್ಲಾ ಎಂದುಕೊಂಡು ಆ ಕಟ್ಟಡದ ಬಳಿಗೆ ಹೋದೆವು.

ಕಟ್ಟಡದವನು ನಮ್ಮನ್ನು ಸ್ವಾಗತಿಸಿದ. ನಾವು ನಮ್ಮ ಪರಿಚಯ ಹೇಳಿಕೊಂಡೆವು; ಇಳಿದುಕೊಳ್ಳಲು ಕೋಣೆಗಳಿವೆಯೇ ಎಂದು ಕೇಳಿದೆವು. ಅವನು ನಮ್ಮನ್ನು ಒಳಕ್ಕೆ ಕರೆದೊಯ್ದಾಗ ನಾವು ಊಖೀಮಠದ ಹೋಟೆಲಿನವನು ಕೊಟ್ಟ ಕಾರ್ಡನ್ನು ಕೊಟ್ಟೆವು. ಅದನ್ನು ಕಂಡ ಕೂಡಲೇ ಅವನು ಮೆತ್ತಗಾದ. ಅವನೊಂದಿಗೆ ಚೌಕಾಶಿ ಮಾಡಿ ಕೋಣೆಗೆ ದರ ನಿಗದಿ ಮಾಡಿ 'ರೂಂ ತೋರಿಸು' ಎಂದೆವು. ಅವನು ನಮ್ಮನ್ನು ಮಹಡಿಯ ಮೇಲಿದ್ದ ಕೋಣೆಗೆ ಕರೆದೊಯ್ದು. ಅಲ್ಲಿ ಒಂದು ಕೋಣೆಯಲ್ಲಿ ನಾವಿಬ್ಬರೂ ನಮ್ಮ ಹೆಗಲ ಚೀಲವನ್ನು ಇಟ್ಟು ಹೊರಗೆ ಬಂದು ನೋಡಿದಾಗ, ''ಚಹಾ ಮಾಡಲೆ?'' ಎಂದು ಹೋಟೆಲಿನ ಮಾಲೀಕ ಕೇಳಿದ. ''ಚಹಾವಲ್ಲ; ನಮಗೆ ಊಟ ಕೊಡು'' ಎಂದೆವು. ''ಊಟ ತಯಾರು ಮಾಡಲು ಸಮಯವಾಗುತ್ತದೆ. ಏನು ಕೊಡಲಿ? ಮ್ಯಾಗಿ ಮಾಡಲೆ?'' ಎಂದಾತ ಕೇಳಿದ. ''ಸರಿ'' ಎಂದೆವು. ಹಾಗೆ ಹೇಳಿ ಅವನು ಹೊರಟುಹೋದ. ಕೋಣೆಯಿಂದ ಹೊರಗೆ ಬಂದ ನಾವು ಕಣ್ಣೆದುರಿಗೆ ಕಂಡ ದೃಶ್ಯವನ್ನು ಆಸ್ವಾದಿಸಿದೆವು.

ಅದೊಂದು ಅಪೂರ್ವ ದೃಶ್ಯ! ನಾವಿರುವ ಹೋಟೆಲ್ ಒಂದು ಬೆಟ್ಟದ ಸೆರಗಿನಲ್ಲಿ, ಸ್ವಲ್ಪ ಮಟ್ಟಿಗೆ ಸಮತಟ್ಟಾದ ಒಂದು ಸ್ಥಳದಲ್ಲಿತ್ತು. ಬಲಭಾಗದಲ್ಲಿ ಒಂದೆರಡು ಗದ್ದೆಗಳು, ಅದರ ಪಕ್ಕದಲ್ಲಿ ದನಗಳ ಕೊಟ್ಟಿಗೆ ಹಾಗೂ ಒಂದೆರಡು ಮನೆ; ಎದುರಿಗೆ ಆಳವಾದ ಕಣಿವೆ. ಎಡಭಾಗದಲ್ಲಿ, ಕಣಿವೆಯಾಚೆಗೆ ಅತ್ಯುನ್ನತವಾದ ಪರ್ವತ ಶಿಖರ, ಆ ಶಿಖರದ ತುದಿಯಲ್ಲಿ ಮರಗಿಡಗಳಿಲ್ಲ, ಬರೀ ಬಂಡೆ, ಕೋಡುಗಲ್ಲು. ಕೆಳಭಾಗದಲ್ಲಿ ದಟ್ಟವಾದ ಅರಣ್ಯ; ಪರ್ವತದ ಅರ್ಧಭಾಗದಷ್ಟು ಕವಿದಿತ್ತು. ಆ ಪರ್ವತದ ಕಣಿವೆಗೂ ನಾವಿದ್ದ ಬೆಟ್ಟಕ್ಕೂ ನಡುವೆ ಒಂದು ಸಣ್ಣ ನದಿ ಜುಳು ಜುಳು ಸದ್ದುಮಾಡುತ್ತಾ ಹರಿದುಬರುತ್ತಿತ್ತು. ಇದನ್ನು ಆ ಊರಿನಲ್ಲಿ ಸರಸ್ವತೀ ನದಿ ಎಂದು ಕರೆಯುತ್ತಾರೆ. ಬಲಭಾಗದಲ್ಲಿ ಇನ್ನೊಂದು ಬೃಹತ್ ಪರ್ವತ, ಅದರ ತಪ್ಪಲಿನಲ್ಲೂ ಭಾರೀ ಕಾಡು. ನಾವಿದ್ದ ಬೆಟ್ಟದ ಹಾಗೂ ಬಲಭಾಗದ ಪರ್ವತಕ್ಕೂ ನಡುವಿನಿಂದ, ದೂರದಲ್ಲಿ ಕೆಲವು ಅತಿ ಎತ್ತರದ ಪರ್ವತಶಿಖರಗಳು ಕಾಣಿಸುತ್ತಿದ್ದವು. ಅವು ಬೆಳ್ಳಿಬೆಟ್ಟಗಳು. ದೂರದಿಂದ ಅವುಗಳ ಅಸಾಧಾರಣ ಸೌಂದರ್ಯವನ್ನು ವರ್ಣಿಸುವುದು ಅಸಾಧ್ಯ. ಬಲಭಾಗದಲ್ಲೂ ಒಂದು ಸಣ್ಣ ನದಿ ಹರಿದುಬರುತ್ತಿತ್ತು. ಇದರ ಹೆಸರು ಮೋರ್‌ಖಂಡಾ ಎಂದು. ಹಿಂದೆ ಹೇಳಿದ ಸರಸ್ವತಿ, ಹಾಗೂ ಈ ಮೋರ್‌ಖಂಡಾ ಎರಡೂ ನದಿಗಳು ನಾವಿದ್ದ ಬೆಟ್ಟದ ತಳದಲ್ಲಿ ಒಂದುಗೂಡುತ್ತವೆ. (ಕೆಲವರು ಇದನ್ನು ಮಧ್ಯಮಹೇಶ್ವರಿ ಮತ್ತು ಮಾರ್ಕಂಡೇಯ ನದಿ ಎಂದೂ ಕರೆದದ್ದಿದೆ.) ಅಲ್ಲಿಂದ ಮುಂದೆ ಈ ನದಿಯನ್ನು 'ಮಧುಗಂಗಾ' ಎಂದು ಕರೆಯುತ್ತಾರೆ. ಗುಪ್ತಕಾಶಿಯ ಬಳಿಯಲ್ಲೆಲ್ಲೋ ಅದು ಮಂದಾಕಿನೀ ನದಿಯನ್ನು ಸೇರುತ್ತದೆ. ಅವುಗಳು ಒಂದು ಗೂಡುವ ಸ್ಥಳಕ್ಕಿಂತ ತುಸು ಹಿಂಭಾಗದಲ್ಲಿ ಒಂದು ಗುಡಿಯಿದೆ, ಕಲ್ಲಿನ ಗುಡಿ; ಅದು ಕ್ಷೇತ್ರಪಾಲನ ಗುಡಿ. ಕ್ಷೇತ್ರಪಾಲ ಎಂದರೆ ಸ್ಥಳೀಯ ರಕ್ಷಕ ದೇವತೆ. ಹಿಮಾಲಯದ ಈ ಭಾಗದಲ್ಲೆಲ್ಲ ಕ್ಷೇತ್ರಪಾಲನ ಗುಡಿಗಳನ್ನು ಅನೇಕ ಕಡೆ ಕಂಡೆವು. ಇಕ್ಕೆಲದಲ್ಲೂ ಹಸಿರು ಕವಿದ ಪರ್ವತಗಳ ಸಾಲು, ಕೆಳಭಾಗದಲ್ಲಿ ನರ್ತಿಸುತ್ತಾ ಸಾಗುವ ನದಿ, ರುದ್ರರಮಣೀಯವಾದ ಕಣಿವೆ – ಇವೆಲ್ಲ ನೋಡುತ್ತ, ನಮ್ಮನ್ನು ನಾವು ಮರೆತೆವು. ಸುತ್ತಮುತ್ತ ಬರೀ ಮೌನ; ಸಣ್ಣ ನದಿಗಳ ಜುಳು ಜುಳು ಮಂಜುಳ ಧ್ವನಿಯಷ್ಟೇ ಅಲ್ಲಿ ನಿರಂತರ ನಾದ.

ಹೋಟೇಲ್ ಮಾಲೀಕನಿಗೆ ಮಾರ್ಗದರ್ಶಿಯೊಬ್ಬನನ್ನು ಗೊತ್ತು ಮಾಡಲು ಕೇಳಿಕೊಂಡೆವು. ಮದ್ದಮಹೇಶ್ವರಕ್ಕೆ ಹೋಗಲು ಒಂದು ದಿನ, ವಾಪಸ್ ಬರಲು ಒಂದು ದಿನ – ಹೀಗೆ ಎರಡು ದಿನಕ್ಕೆ ಐನೂರು ರೂಪಾಯಿ ಎಂದು ನಿಗದಿಯಾಯಿತು. ಮಧ್ಯಾಹ್ನ ವಿಶ್ರಾಂತಿಯ ನಂತರ ನಾವು ಸಮೀಪದ ಸ್ಥಳಗಳನ್ನು ನೋಡುವಷ್ಟರಲ್ಲಿ ಸಂಜೆಯಾಯಿತು. ರಾತ್ರಿ ಹೊತ್ತು ತುಂಬಾ ಚಳಿ, ನಡೆದು ಆಯಾಸಗೊಂಡ ದೇಹ; ಮಲಗಿದ್ದೇ ತಡ, ನಿದ್ದೆ ಹತ್ತಿಬಿಟ್ಟಿತು.

ಬಾಂತೋಲಿ



### ೪. ಮದ್ದ ಮಹೇಶ್ವರದತ್ತ

ಮರುದಿನ ಬೆಳಗ್ಗೆ ಐದು ಗಂಟೆಗೇ ಎದ್ದು ಮುಖತೊಳೆದು ತಯಾರಾಗಿಬಿಟ್ಟೆವು. ಆದಷ್ಟು ಬೇಗ ಹೊರಟರೆ, ಇನ್ನೂ ಚಳಿಯಿರುವಾಗಲೇ ಸಾಕಷ್ಟು ದೂರ ಕ್ರಮಿಸಬಹುದು ಎಂದು ಹೇಳಿದರು ಕರುಣಾಕರಾನಂದರು. ಐದೂವರೆ ಗಂಟೆಯ ಹೊತ್ತಿಗೆ ನಮ್ಮ ಹೆಗಲ ಚೀಲ, ದಂಡಗಳೊಂದಿಗೆ ಮಹಡಿಯ ಕೋಣೆಯಿಂದ ಕೆಳಗಿಳಿದು ಬಂದೆವು. ಹೋಟೆಲ್ ಮಾಲೀಕನನ್ನು ಕೇಳಿದೆವು, 'ಎಲ್ಲಯ್ಯ ನಿನ್ನ ಗೈಡ್?' ಎಂಬುದಾಗಿ. ಅವನು, ''ಬರ್ತಾನೆ, ಐದೂವರೆಗೆ ಬರುತ್ತೇನೆ ಎಂದಿದ್ದ'' ಎಂದು ಅವನಿಗೆ ಫೋನ್ ಮಾಡತೊಡಗಿದ. ಅಷ್ಟರಲ್ಲಿ ಒಬ್ಬ ಉದ್ದ

ನೆಯ ವ್ಯಕ್ತಿ ಬಂದೇಬಿಟ್ಟ. ''ಅವನೇ ನಿಮ್ಮ ಗೈಡ್'' ಎಂದ ಹೋಟೆಲ್ ಮಾಲೀಕ. ಗೈಡಿನ ಪರಿಚಯ ಮಾಡಿಕೊಂಡೆವು. ''ನನ್ನ ಹೆಸರು ಬೀರೇಂದ್ರ ಸಿಂಗ್ ಪವಾರ್. ಇಲ್ಲೇ ಗೌಂಡರ್‌ನವನು'' ಎಂದ. ಅಷ್ಟರಲ್ಲಿ ಹೋಟೆಲ್ ಮಾಲೀಕ ಚಹಾ ತಂದು ಕೊಟ್ಟ. ಅದನ್ನು ಕುಡಿದು ನಾವು ಗೈಡ್‌ನೊಂದಿಗೆ ಹೊರಟೆವು. ಆಗ ಸಮಯ ಸುಮಾರು ೫.೫೦; ಇನ್ನು ಪೂರ್ತಿಯಾಗಿ ಬೆಳಕಾಗಿರಲಿಲ್ಲ. ಹೊರಡುತ್ತಲೇ ಗೈಡ್ ಹೇಳಿದ, ಇಲ್ಲಿಂದ ಮುಂದಕ್ಕೆ ಏಕ್‌ದಂ ಏರುದಾರಿ ಎನ್ನುವುದಾಗಿ. ಅಲ್ಲಿಯವರೆಗೆ ಏರು, ತಗ್ಗು – ಹೀಗೆ ಗುಡ್ಡಗಳ ನಡುವೆ, ಕಾಡು ದಾರಿಯಲ್ಲಿ ಸಾಗಿಬಂದಿದ್ದೆವು. ಇನ್ನು ಮುಂದಿನ ದಾರಿಯಲ್ಲಿ ತಗ್ಗು ಎನ್ನುವುದೇ ಇಲ್ಲ ಎಂದು ಅವನು ಹೇಳಿದ.

ಆರಂಭದಲ್ಲೇ ಕಡಿದಾದ ದಾರಿಯನ್ನು ಏರುತ್ತ ಸಾಗಬೇಕಾಯಿತು. ನಡೆಯುತ್ತ ಅರಣ್ಯ ಪ್ರದೇಶವನ್ನು ಹೊಕ್ಕು, ಮತ್ತೆ ಖಾಲಿ ಬೆಟ್ಟದ ಸೆರಗನ್ನು ದಾಟಿ, ಸುಮಾರು ಎಂಟುಗಂಟೆಯ ಹೊತ್ತಿಗೆ ಮೂರು ನಾಲ್ಕು ಮನೆಗಳಿರುವ ಒಂದು ಪ್ರದೇಶಕ್ಕೆ ಬಂದೆವು. ಖಡೇರಹ ಎಂಬ ಆ ಸ್ಥಳದಲ್ಲಿ ಒಂದು ಗ್ಲಾಸ್ ಚಹಾ ಕುಡಿದೆವು. ಅಲ್ಲಿ ನೋಡುತ್ತೇವೆ, ನಮ್ಮ ಗೈಡ್ ಬೀರೇಂದ್ರ ಸಿಂಹನ ಮಗ ನಮ್ಮೊಂದಿಗೆ ಬಂದಿದ್ದ. ವಿಚಾರಿಸಿದಾಗ, ಅವನೂ ತಂದೆಯೊಂದಿಗೆ ಮದ್ದ ಮಹೇಶ್ವರಕ್ಕೆ ಹೊರಟಿದ್ದ ಎಂದು ತಿಳಿದುಬಂತು. ಅಲ್ಲಿಂದ ಮುಂದಕ್ಕೆ ನಡೆಯುತ್ತ ಇನ್ನೂ ಸ್ವಲ್ಪ ಎತ್ತರದ ಸ್ಥಳಕ್ಕೆ ಬಂದಾಗ ಅಲ್ಲಿ ಕೆಲವು ಗದ್ದೆಗಳು, ಕೆಲವು ಮನೆಗಳು ಕಾಣಿಸಿಕೊಂಡವು. ಆ ಊರಿನ ಹೆಸರು 'ನಾನು' ಎಂದು ಬೀರೇಂದ್ರ ಸಿಂಹ ತಿಳಿಸಿದ. ಆ ಊರನ್ನೂ ದಾಟಿ ಏರುದಾರಿಯಲ್ಲಿ ಸಾಗುತ್ತಿರಬೇಕಾದರೆ ಒಂದು ಅತಿ ಮನೋಹರವಾದ ದೃಶ್ಯ ಕಾಣಿಸಿತು. ನಾವು ಏರುತ್ತಿದ್ದ ಬೆಟ್ಟದ ಬಲತುದಿಯಲ್ಲಿ ಆಳವಾದ ಕಣಿವೆ, ಅದರಾಚೆಗೆ ಕಾಣಿಸುತ್ತಿದ್ದ ಬೆಟ್ಟದ ತುದಿ ನೋಡಬೇಕೆಂದು ತಲೆಯೆತ್ತಿದ್ದೆವು – ಅದೋ! ಗಗನವನ್ನೇ ಅಳೆಯಹೊರಟಿದೆಯೋ ಎನ್ನುವಂತೆ ಅತಿ ಎತ್ತರವಾದ ಪರ್ವತ! ಆ ಪರ್ವತದ ತುದಿಯವರೆಗೂ ದಟ್ಟವಾದ ಅರಣ್ಯ; ಹಸಿರು ಹೊದೆದು ನಳನಳಿಸುತ್ತಿದ್ದ ಆ ಪರ್ವತ ಕಣ್ಮನಗಳಿಗೆ ತಂಪನ್ನೆರೆಯಿತು. ಕಣಿವೆಯ ತಳದಲ್ಲಿ ಅದೇ ಸರಸ್ವತಿ ನದಿ – ಸಣ್ಣದಾಗಿ ಹರಿಯುತ್ತಿದೆ. ನಾವು ಬೆಟ್ಟವೇರುತ್ತ ಹೋದಂತೆ ಕಣಿವೆಯ ಆಳವೂ ಹೆಚ್ಚುತ್ತ ಹೋಯಿತು; ಅಬ್ಬಾ ಅದೆಂಥಾ ಪ್ರಪಾತ! ಅಥವಾ, ಎಷ್ಟೊಂದು ಎತ್ತರವನ್ನು ಏರುತ್ತ ಬಂದೆವು! ಹಿಮಾಲಯದಲ್ಲಿ ಪ್ರತಿಯೊಂದೂ ಅದ್ಭುತ, ಪ್ರತಿಯೊಂದೂ ಮೈ ನವಿರೇಳಿಸುವಷ್ಟು ಭವ್ಯ.

ಮೈಖಂಬಾ ಚಟ್ಟಿ ಎನ್ನುವ ಪ್ರದೇಶದಲ್ಲಿ ಒಂದು 'ಹೋಟೆಲ್.' ನಿಜವಾಗಿಯೂ ಅದೊಂದು ಸಣ್ಣ ಗುಡಿಸಲು; ಅದರಲ್ಲಿ ನಾಲ್ಕಾರು ಕೋಣೆಗಳು. ಒಂದರಲ್ಲಿ ಮಾಲೀಕ ಕೆಲವೊಂದು ಸಣ್ಣಪುಟ್ಟ ಸಾಮಾನುಗಳನ್ನು ಇಟ್ಟುಕೊಂಡಿದ್ದಾನೆ. ಅದೇ ಅವನ 'ಅಂಗಡಿ' ಹಾಗೂ 'ಹೋಟೆಲ್.' ಪಕ್ಕದಲ್ಲೇ ಅವನ ಕೋಣೆ, ಅವನ ಹೊಲಗದ್ದೆಗಳು; ಅಂಗಡಿಯ ಈ ಭಾಗದಲ್ಲಿ ಒಂದೆರಡು ಕೋಣೆಗಳು ಅಲ್ಲಿಗೆ ಬರುವ ಯಾತ್ರಿಕರ 'ಲಾಡ್ಜ್' ಬೇಕಾದರೂ ಆಗಬಹುದು. ಅಂತೂ ಅಪರೂಪವಾಗಿ ಅಲ್ಲಿಗೆ ಬರುವ ಯಾತ್ರಿಕರ ಪಾಲಿಗೆ ಅದೇ ರೆಸ್ಟೋರೆಂಟ್. ಒಟ್ಟಿನಲ್ಲಿ ಅದೇ ಮನೆ, ಹೋಟೆಲ್, ಲಾಡ್ಜ್ ಎಲ್ಲವೂ. ಅಲ್ಲಿ ನಾವು ಮತ್ತೆ ನೂಡಲ್ಸ್ ತಿಂದು ಹೊಟ್ಟೆ ತುಂಬಿಸಿಕೊಂಡು ಮತ್ತೆ ಹೊರಟೆವು.



ಮದ್ದಮಹೇಶ್ವರದ ಹಾದಿ..

ಅಲ್ಲಿಂದ ಮುಂದೆ ಹಾವಿನಂತೆ ಸುತ್ತಿ ಬಳಸಿ ಸಾಗುವ ದಾರಿಯಲ್ಲಿ ಬೆಟ್ಟವೇರುತ್ತ ಹೊರಟ ನಾವು, ಅಲ್ಲಲ್ಲಿ ದನ ಮೇಯಿಸಲು ಬರುವ ಹುಡುಗರು, ಗದ್ದೆಯಲ್ಲಿ ಕೆಲಸಮಾಡುವ ಹೆಂಗಸರು – ಹೀಗೆ ಹಿಮಾಲಯದ ದೈನಂದಿನ ಬದುಕು ಬೆಳಗಿನ ಬಿಸಿಲಲ್ಲಿ ಚಟುವಟಿಕೆಯಲ್ಲಿ ತೊಡಗಿದ್ದನ್ನು ಕಂಡೆವು. ಹಿಮಾಲಯದ ಎಲ್ಲೆಡೆ ಗದ್ದೆಯಲ್ಲಿ ಬೆಳಗಿನಿಂದ ಸಂಜೆಯ ತನಕ ಏನಾದರೂ ಕೆಲಸ ಮಾಡುತ್ತಿರುವವರು ಹೆಂಗಸರೇ; ಗಂಡಸರು ಅದೇನು ಮಾಡುತ್ತಾರೊ! ಹೋಟೆಲ್, ಅಂಗಡಿ ಇತ್ಯಾದಿ ಏನೇನೋ ವ್ಯಾಪಾರ ಇನ್ನೇನೋ ಮಾಡುತ್ತಾರೆ. ಗದ್ದೆಯಲ್ಲಿ ದುಡಿಯುವ ಗಂಡಸರು ಕಣ್ಣಿಗೆ ಬೀಳುವುದೇ ಅಪರೂಪ. ಬೆಟ್ಟದ ತುದಿಯ ಭಾಗದಲ್ಲಿ ದಟ್ಟವಾದ ಕಾಡಿನ ನಡುವೆ ನಮ್ಮ ನಡಿಗೆ ಮುಂದುವರಿಯಿತು. ಇಷ್ಟು ಹೊತ್ತಾಗುವಾಗಲೇ ನಮ್ಮ ಶಕ್ತಿಯೆಲ್ಲ ಉಡುಗಿಹೋಗಿ, 'ಉಸ್ಸಪ್ಪಾ' ಎನ್ನತೊಡಗಿದೆವು. ನಿರಂತರ ಮೂರು ನಾಲ್ಕು ಗಂಟೆಯ ಕಾಲ ನಡೆಯುತ್ತ ಬಂದಿದ್ದೆವು. ನಮ್ಮ ಗೈಡ್ ಅನೇಕ ವಿಷಯಗಳನ್ನು ಹೇಳುತ್ತ ಬಂದ. ಅಲ್ಲಿನ ಜನಜೀವನ, ನಂಬಿಕೆಗಳು, ಜನರ ಜೀವನೋಪಾಯ, ಕೃಷಿ, ಸಂಸ್ಕೃತಿ, ಹೀಗೆ ಏನೇನೋ ಮಾಹಿತಿಗಳನ್ನೆಲ್ಲ ಹೇಳತೊಡಗಿದ. ಕರುಣಾಕರಾನಂದಜಿ ವಿಶೇಷವಾಗಿ ಅಲ್ಲಿನ ಜನರ ಸಂಸ್ಕೃತಿಯ ಬಗ್ಗೆ ಆಸಕ್ತಿ ತಾಳಿ ಅನೇಕ ಪ್ರಶ್ನೆಗಳನ್ನು ಕೇಳತೊಡಗಿದರು. ನಮ್ಮಲ್ಲಿ ದೆವ್ವಗಳಿರುವಂತೆ, ಹಿಮಾಲಯದ ಕಡೆ ವನದೇವತೆಗಳಿಗೆ ಜನ ಹೆದರುತ್ತಾರಂತೆ. ಆ ಬಗ್ಗೆ ಬೀರೇಂದ್ರ ಸಿಂಹ ಹೇಳಿದ್ದೇನೆಂದರೆ, ನಿಜವಾಗಿಯೂ ವನದೇವತೆಗಳಿವೆ; ಅವುಗಳನ್ನು ಕಂಡವರಿದ್ದಾರೆ. ಅದಕ್ಕೆ ಜನ ಬಹಳ ಹೆದರುತ್ತಾರೆ. ಅವನ ಮಾತಿನಿಂದ ಅವನಿಗೂ ಅದರಲ್ಲಿ ನಂಬಿಕೆಯಿದ್ದಂತೆ ಕಂಡುಬಂತು.

ನಾವೀಗ ಬೆಟ್ಟದ ತುದಿಯ ಭಾಗದಲ್ಲಿರುವ ಕಾಡಿನಲ್ಲೇ ಸಾಗುತ್ತಿದ್ದೆವು. ನಮ್ಮ ಬಲಬದಿಗೆ ಆಳವಾದ ಪ್ರಪಾತ; ದೇವದಾರು ಇತ್ಯಾದಿ ಮರಗಳಿಂದ ದಟ್ಟವಾಗಿ ಹಬ್ಬಿದ ಬೃಹತ್ ಪರ್ವತ. ಪರ್ವತದ ತುದಿಯಲ್ಲಿ ಅದರಾಚೆಗಿನ ಹಿಮಾವೃತ ಶಿಖರಗಳು ಕಾಣಿಸಿಕೊಂಡವು. ಅವುಗಳಲ್ಲಿ , ಬಲಭಾಗಕ್ಕೆ 'ಪಾಂಡವಸೇರಾ' ಹಾಗೂ ಎಡಭಾಗಕ್ಕೆ 'ನಂದೀಕುಂಡ' ಎಂಬ ಎರಡು ಪ್ರಸಿದ್ಧ ಪರ್ವತ ಶಿಖರಗಳನ್ನು ಮಾರ್ಗದರ್ಶಕ ಬೀರೇಂದ್ರ ಸಿಂಹ ಪರಿಚಯಿಸಿಕೊಟ್ಟ. ಕೆಲವು ಪರ್ವತಾರೋಹಿಗಳು ಈ ಪರ್ವತಗಳ ತುದಿಗೆ ಹೋಗುತ್ತಾರೆಂದೂ ಅವನು ಹೇಳಿದ. ಒಂದು ಹಂತದವರೆಗೆ ಕಾಲುದಾರಿಯಲ್ಲೇ ಹೋಗಬಹುದೆಂದೂ, ನಮಗೆ ಸಮೀಪದಲ್ಲಿ ಕಾಣಿಸುವ ವನಾವೃತ ಪರ್ವತದಾಚೆಗೆ ಒಂದು ಸುಂದರವಾದ ಸರೋವರವಿದೆಯೆಂದೂ ಅವನು

ಹೇಳಿದ. ಒಟ್ಟಿನಲ್ಲಿ ನಮ್ಮ ಹಾದಿಯುದ್ದಕ್ಕೂ ಕಾಣಿಸುವ ಈ ಪರ್ವತಗಳ ದೃಶ್ಯ ಅಸಾಧಾರಣ.

**೫. ಪರ್ವತದ ಮೇಲೊಂದು ಸುಂದರ ದೇಗುಲ:** ಗಂಟೆ ಸುಮಾರು ಹನ್ನೊಂದಾಗುತ್ತಾ ಬಂತು. 'ಮದ್ದಮಹೇಶ್ವರ ಬಂದೇ ಬಿಟ್ಟಿತು' ಎಂದ ನಮ್ಮ ಗೈಡ್. 'ಈ ಕಾಡನ್ನು ದಾಟಿಬಿಟ್ಟರೆ ಬುಗ್ಯಾಲ್ ಸಿಗುತ್ತದೆ. ಇನ್ನೂ ಹತ್ತೇ ನಿಮಿಷದಲ್ಲಿ ಅಲ್ಲಿರುತ್ತೇವೆ' ಎಂದ. ಸ್ವಲ್ಪ ದೂರ ಹೋಗುತ್ತಲೇ ನಮಗೆ ಮದ್ದಮಹೇಶ್ವರ ದೇಗುಲ, ಅದರ ಸುತ್ತಮುತ್ತ ಮನೆಗಳು ಕಾಣಿಸಿದವು. ಅದು ಒಂದು ಸಣ್ಣ ಊರು ಎಂದರೂ ಎನ್ನಬಹುದು. ಪರ್ವತವೇರುತ್ತ ಬಂದಂತೆ ಚಳಿ ಹೆಚ್ಚಾದುದು ನಮ್ಮ ಗಮನಕ್ಕೆ ಬಂದಿರಲಿಲ್ಲ. ಕಾರಣ, ನಡೆಯುವಾಗ ಆಯಾಸವಾಗುತ್ತದೆ, ದೇಹದ ಶಾಖ ಏರುತ್ತದೆ. ಅಲ್ಲದೆ ನಮ್ಮ ಗಮನವೆಲ್ಲ ಸುತ್ತಮುತ್ತಣ ದೃಶ್ಯಗಳ ಕಡೆಗೇ ಹರಿದಿರುತ್ತದೆ. ಈಗ ಇದ್ದಕಿದ್ದಂತೆ ತುಂಬ ಚಳಿಯೆನ್ನಿಸತೊಡಗಿತು. ಆದರೆ ಹಸಿರು ಹುಲ್ಲಿನಿಂದ ಆವೃತವಾದ ಇಡೀ ಪರಿಸರ, ಸುಂದರವಾದ ಕಲ್ಲಿನ ದೇಗುಲ, ಹುಲ್ಲಿನ ಮನೆಗಳು – ಅತ್ಯಂತ ರಮಣೀಯವಾದ ಆ ದೃಶ್ಯ ಎಲ್ಲವನ್ನೂ ಮರೆಸಿತು.

ಎಲ್ಲಕ್ಕೂ ಮೊದಲು ಬಾಡಿಗೆ ಕೋಣೆ ಗೊತ್ತು ಮಾಡಿಕೊಳ್ಳಬೇಕು. ಅಲ್ಲಿ ದೇವಸ್ಥಾನದವರದ್ದೇ ಆದ ಒಂದು ಕಟ್ಟಡವಿದೆ; ಅಲ್ಲಿ ಕೋಣೆಗಳು ಸಿಗುತ್ತವೆ ಎಂದು ಗೈಡ್ ಹೇಳಿದ. ನಾವು ಬೇಗನೆ ನಮ್ಮ ಸಾಮಾನುಗಳನ್ನು ಅಲ್ಲಿಟ್ಟು, ದೇವರ ದರ್ಶನಕ್ಕೆ ಹೋಗಬೇಕಿತ್ತು. ಏಕೆಂದರೆ ಆಗಲೇ ಹನ್ನೊಂದು ಗಂಟೆ; ಹನ್ನೆರಡು ಗಂಟೆಗೆ ದೇವಸ್ಥಾನ ಬಾಗಿಲು ಮುಚ್ಚುತ್ತಾರೆ. ಆದರೂ ಸಮಯವಿದೆಯಲ್ಲ ಎಂದು ಬಾಡಿಗೆ ರೂಂ ಬುಕ್ ಮಾಡಲು ಹೋದೆವು. ಬಿಳಿ–ನೀಲಿ ಬಣ್ಣ ಬಳಿದ ಕಟ್ಟಡ; ಹಿಮಾಲಯದ ಕಟ್ಟಡಗಳಂತೆ ಅಡ್ಡಾದಿಡ್ಡಿ ಕಟ್ಟಲಾಗಿತ್ತು. ಅಂದವಿಲ್ಲ, ಆಕಾರವಿಲ್ಲ. ಅಲ್ಲಿ ಒಂದೆಡೆ ಕೋಣೆ ಖಾಲಿಯಿದ್ದುದಾಗಿ ಆ ಕಟ್ಟಡದ ಮಾಲೀಕ ತಿಳಿಸಿದ. ಒಂದು ದಿನಕ್ಕೆ ನಾನ್ನೂರು ರೂಪಾಯಿ ಬಾಡಿಗೆ ಹೆಚ್ಚೆನಿಸಿತು; ಆದರೆ ವಿಧಿಯಿಲ್ಲ. ಕೋಣೆಯೊಳಗೆ ಹೊಕ್ಕು ನೋಡಿದರೆ – ಥಂಡಿ ಬಡಿದ ಮಂಚ, ಅದರಲ್ಲಿ ಹಾಸಿಗೆ ಕಂಬಳಿಗಳು; 'ಹೇಗಪ್ಪಾ ಇಲ್ಲಿ ಒಂದು ದಿನ ಕಳೆಯಲಿ?' ಅನ್ನಿಸಿತು. ಇದ್ದದ್ದರಲ್ಲಿ ಅದೇ ಸ್ವರ್ಗದಂಥ ಜಾಗ ಎಂದು ಭಾವಿಸಿಕೊಂಡು ಸಾಮಾನುಗಳನ್ನು ಅಲ್ಲಿಟ್ಟೆವು. ಚಳಿ ಅತಿಯೆನಿಸಿದ್ದರಿಂದ ಸ್ವೆಟರ್ ಇತ್ಯಾದಿಗಳನ್ನು ಚೆನ್ನಾಗಿ ಧರಿಸಿಕೊಂಡು ದೇವಸ್ಥಾನದತ್ತ ನಡೆದೆವು.

ಸಣ್ಣಗೆ ಮಳೆ ಸುರಿಯತೊಡಗಿತು. ನಾವು ದೇವಸ್ಥಾನದೊಳಕ್ಕೆ ಹೋಗಿ ನಿಂತೆವು. ನಾವು ಅಲ್ಲಿಗೆ ಹೋದಾಗ ಅಲ್ಲಿದ್ದ ಪೂಜಾರಿ (ಮುಖ್ಯ ಪೂಜಾರಿಯಲ್ಲ) ನಮ್ಮನ್ನು ದೇವರ ದರ್ಶನ ಮಾಡಲು ಹೇಳಿದ. ಅಲ್ಲಿ ಒಬ್ಬರು ಧಡೂತಿ ಬ್ರಾಹ್ಮಣ (ಇವರೇ ಮುಖ್ಯ ಪೂಜಾರಿಗಳು) ನಾನಾ ಮಂತ್ರಗಳನ್ನು ಹೇಳುತ್ತ ದೇವರಿಗೆ ಅಭಿಷೇಕ ಇತ್ಯಾದಿ ಮಾಡುತ್ತಿದ್ದರು. ದೇವರ ದರ್ಶನ ಮಾಡಿ ಬಂದೆವು. ಅಲ್ಲಿ ನಾನಾ ಬಗೆಯ ಶಿವಲಿಂಗಗಳ ಮಧ್ಯೆ ಒಂದು ದೊಡ್ಡದಾದ ಶಿವಲಿಂಗ; ಅದರ ಸುತ್ತ ರುದ್ರಾಕ್ಷಿಮಾಲೆ ಇತ್ಯಾದಿಗಳೆಲ್ಲ ಇದ್ದವು. ಒಂದೆಡೆ ಕುಳಿತು ರುದ್ರ ಪಾರಾಯಣ ಮಾಡಬಹುದೇ ಎಂದು ನಾವು ನಮ್ಮ ಬಳಿ ಇದ್ದ ಸಹ–ಅರ್ಚಕರನ್ನು ಕೇಳಿದೆವು. ಅವರು 'ಮಾಡುವುದಾದರೆ ಅಲ್ಲಿ ಕುಳಿತುಕೊಂಡು ಮಾಡಿ' ಎಂದು ಹೊರಭಾಗದ ಮಂಟಪದಲ್ಲಿ ಒಂದೆಡೆ ಎರಡು ಆಸನ ಹಾಕಿಕೊಟ್ಟರು.


ಮದ್ದಮಹೇಶ್ವರ ದೇವಾಲಯ

ನಾವು ಆದಷ್ಟು ಬೇಗನೆ ಪಾರಾಯಣ ಮುಗಿಸಬೇಕಾದ್ದರಿಂದ ಬೇಗನೆ ರುದ್ರ ಪಾರಾಯಣ ಮಾಡಿದೆವು. ದೇವಸ್ಥಾನದ ಬಾಗಿಲು ಹಾಕುವ ಸಮಯವಾಗಿತ್ತು. ದೇವರಿಗೆ ನಮಸ್ಕಾರ ಮಾಡಿ ಹೊರಬಂದಾಗ ಅಲ್ಲಿ ನಿಂತಿದ್ದ ಮುಖ್ಯ ಅರ್ಚಕರು, ''ಎಲ್ಲಿಂದ ಬಂದಿರಿ?'' ಎಂದು ಕನ್ನಡದಲ್ಲಿ ವಿಚಾರಿಸಿದರು. ''ಮೈಸೂರು ರಾಮಕೃಷ್ಣ ಆಶ್ರಮದಿಂದ'' ಎಂದೆವು ನಾವು. ಕುಶಲೋಪರಿ ಮಾತನಾಡಿದ ಬಳಿಕ ಅಲ್ಲಿನ ಪೂಜೆಯ ಸಮಯ, ಸಾಯಂಕಾಲ ಎಷ್ಟು ಗಂಟೆಗೆ ಆರತಿ ಇತ್ಯಾದಿ ವಿಚಾರಿಸಿದೆವು. ಸಾಯಂಕಾಲ ಐದುಗಂಟೆಗೆ ದೇವಸ್ಥಾನ ತೆರೆಯುವುದಂತೆ. ಆರೂವರೆಗೆ 'ಶೃಂಗಾರ ಆರತಿ' ನಡೆಯುವುದಂತೆ. ''ಅಷ್ಟರವರೆಗೆ ಚೆನ್ನಾಗಿ ವಿಶ್ರಾಂತಿ ಪಡೆಯಿರಿ'' ಎಂದರು ಅರ್ಚಕರು.

ದೇವಸ್ಥಾನದಿಂದ ನಮ್ಮ ಕೋಣೆಯ ಕಡೆಗೆ ಬಂದಾಗ ನಮ್ಮ ಗೈಡ್ ಮಹೇಂದ್ರ ಸಿಂಗ್ ನಮ್ಮನ್ನು ಕರೆದು, ''ಊಟ ಮಾಡೋಣ, ಬನ್ನಿ'' ಎಂದ. ಅವನಿಗೆ ಪರಿಚಯದವನ ಹೋಟೆಲಿಗೆ ನಮ್ಮನ್ನು ಕರೆದುಕೊಂಡು ಹೋದ. ಹೋಟೆಲಿನವನು ಅವನ ಸ್ನೇಹಿತನೇ ಇರಬೇಕು. ಮಹೇಂದ್ರ ಸಿಂಹನಿಗೂ ಅವನ ಮಗನಿಗೂ ಅಲ್ಲೇ ವಾಸ್ತವ್ಯ ಕೊಟ್ಟಿದ್ದ. ಹೋಟೆಲಿನವನು ಚಪಾತಿ, ಪಲ್ಯ, ಅನ್ನ ಇತ್ಯಾದಿಗಳನ್ನು ಬಡಿಸಿಕೊಟ್ಟ. ತುಂಬ ಒಳ್ಳೆಯ ಅಡುಗೆ; ರುಚಿಕಟ್ಟಾಗಿತ್ತು. ಕೈ ತೊಳೆಯಲು ಹೊರಬಂದರೆ, ಈ ಮೈಕೊರೆಯುವ ಚಳಿಗೆ ತಣ್ಣೀರಿನಲ್ಲಿ ಹೇಗೆ ಕೈ ತೊಳೆಯುವುದಪ್ಪಾ ಎಂದು ಚಿಂತೆಯಾಯಿತು. ಆದರೆ ಅದಕ್ಕೂ ಬಿಸಿನೀರು ಕೊಟ್ಟಿದ್ದರಿಂದ ಬದುಕಿದೆವು. ಊಟ ಮುಗಿಸಿ, ಬೆಚ್ಚನೆಯ ಬಿಸಿಲಲ್ಲಿ ಸ್ವಲ್ಪ ಹೊತ್ತು ನಡೆದಾಡಿದೆವು. ಅತಿಯಾದ ಚಳಿಯಿದ್ದರೂ ಮೈಮೇಲೆ ಬಿಸಿಲು ಬಿದ್ದಾಗ ಅದೆಂಥ ಹಿತವೆನಿಸುತ್ತಿತ್ತು! ಸುತ್ತಮುತ್ತ ಹಿಮಾವೃತ ಪರ್ವತಗಳೆಲ್ಲ ಬಿಸಿಲಿನ ಬೆಳಕಿಗೆ ಥಳಥಳಿಸುತ್ತಿದ್ದವು. ದೂರದ ಚೌಖಂಬಾ ಪರ್ವತದ ತುದಿಯಲ್ಲಂತೂ ಮೋಡ, ಗಾಳಿಗಳ ಆಟ ವಿಚಿತ್ರವಾಗಿರುತ್ತಿತ್ತು. ಕ್ಷಣಕ್ಷಣಕ್ಕೂ ಪರ್ವತದ ತುದಿಯ ದೃಶ್ಯ ಬದಲಾಗುತ್ತಿತ್ತು. ಅದನ್ನು ಕಂಡಾಗ ಅನಿಸತೊಡಗಿತು, ಹಿಮಾಲಯದ ವಾತಾವರಣ ಎಷ್ಟೊಂದು ಕ್ಷಿಪ್ರವಾಗಿ ಬದಲಾಗುವುದೆಂದರೆ, ಅಲ್ಲಿ 'ಇದು ಹೀಗೆ' ಎಂದು ಏನನ್ನೂ ಹೇಳಲಾಗದು. ನಮ್ಮ ಕೋಣೆಯ ಹಿಂಭಾಗದಲ್ಲಿದ್ದ ಆಳವಾದ ಕಣಿವೆಯನ್ನು ನೋಡಿ ಬೆರಗಾದೆವು. ಅಲ್ಲಿನ ದೃಶ್ಯಗಳೆಲ್ಲ ರುದ್ರರಮಣೀಯ. ಆಕಾಶವನ್ನು ಕೊರೆಯುವಂತಿರುವ ಉನ್ನತೋನ್ನತ ಪರ್ವತ ಶಿಖರಗಳು; ತುದಿಯಲ್ಲಿ ಹಿಮಾಚ್ಛಾದಿತವಾಗಿವೆ. ಕಣಿವೆಗಳು ಎಷ್ಟು ಆಳವಾಗಿರುತ್ತವೆಯೆಂದರೆ, ಮೇಲಿನಿಂದ ನೋಡಿದರೆ ತಲೆ ತಿರುಗಬೇಕು. ಇನ್ನು ಪರ್ವತಗಳಲ್ಲೆಲ್ಲ ತುಂಬಿಕೊಂಡಿರುವ ಮರಗಿಡಗಳು (ಮುಖ್ಯವಾಗಿ ದೇವದಾರು